ಉ) ಸೂಕ್ಷ್ಮ ಹನಿ ನೀರಾವರಿ ಸೌಲಭ್ಯ ಒದಗಿಸುವ ಯೋಜನಾ ವರದಿಯು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಊ) ಈ ಯೋಜನೆಯನ್ನು 2016 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕಾಮಗಾರಿಗಳ ವಿಳಂಬ

2129 (3146); ಶ್ರೀ ಗುರುಪಾಗೌಡ ಸಂಗನಗೌಡ ಪಾಟೀಲ (ರೋಣ)

ಅ) ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಕೆಲವೊಂದು ಕಾಮಗಾರಿಗಳಿಗೆ ಇಲಾಖೆಯಿಂದ ಮಂಜೂರಾತಿ ನೀಡುವಲ್ಲಿ ವಿಳಂಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 3 ವರ್ಷಗಳಲ್ಲಿ ಈ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು? (ವಿವರಗಳನ್ನು ನೀಡುವುದು)

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಸಿಂಗಟಾಲೂರು ಏತ ನೀರಾವರಿ ಯೋಜನೆ ಅಡಿಯಲ್ಲಿ ಕಾಲಕಾಲಕ್ಕೆ ಸಲ್ಲಿಸಲಾದ ಯೋಜನಾ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನಿಯಮಾನುಸಾರ ಕ್ರಮ ವಹಿಸಿ ಮಂಜೂರಾತಿ ನೀಡಲಾಗಿರುತ್ತದೆ. ಈ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿಯನ್ನು ಅನುಮೋದನೆಗೆ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕಳೆದ 3 ವರ್ಷಗಳಲ್ಲಿ ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಬಿಡುಗಡೆ ಮಾಡಿ ವೆಚ್ಚ ಮಾಡಲಾದ ಅನುದಾನದ ವಿವರಗಳು ಕೆಳಗಿನಂತಿವೆ:

ವರ್ಷ	ವೆಚ್ಚ (ರೂ. ಲಕ್ಷಗಳಲ್ಲಿ)
2011–12	24045.00

2012–13	33737.00
2013–14	17462.00

ಪಿಂಚಣಿ ಅದಾತಲತ್‌ಗಳು

2130 (2121); ಶ್ರೀ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ವಿವಿಧ ಬಗೆಯ ಪಿಂಚಣಿಗಾಗಿ ಬಂದಿದ್ದ ಅರ್ಜಿಗಳೆಷ್ಟು; ಈ ಪೈಕಿ ಇಲ್ಲಿಯವರೆವಿಗೆ ಎಷ್ಟು ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ; ಎಷ್ಟು ಜನರಿಗೆ ಪಿಂಚಣಿ ಹಣ ಲಭ್ಯವಾಗುತ್ತಿದೆ; (ವಿಧಾನ ಸಭಾಕ್ಷೇತ್ರವಾರು ಅಂಕಿ ಅಂಶಗಳನ್ನು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಕಳೆದ ಒಂದು ವರ್ಷದ ಅವಧಿಯಲ್ಲಿ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಪಿಂಚಣಿ ಅದಾಲತ್‌ಗಳನ್ನು ನಡೆಸಲಾಗಿದೆ; ಈ ಅದಾಲತ್‌ಗಳ ಮೂಲಕ ಶೇಕಡ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; (ಪಿಂಚಣಿ ಅದಾಲತ್‌ಗಳು ನಡೆದ ದಿನ ಮತ್ತು ಸ್ಥಳ ಹಾಗೂ ಭಾಗವಹಿಸಿದ್ದ ಅಧಿಕಾರಿಗಳ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ವಿವಿಧ ಬಗೆಯ ಪಿಂಚಣಿಗಾಗಿ ಸ್ವೀಕೃತವಾದ ಹಾಗೂ ಮಂಜೂರು ಮಾಡಲಾದ ಅರ್ಜಿಗಳ ವಿಧಾನಸಭಾ ಕ್ಷೇತ್ರವಾರು ಅಂಕಿ–ಅಂಶಗಳ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ. ಮಂಜೂರಾದ ಎಲ್ಲಾ ಫಲಾನುಭವಿಗಳಿಗೆ ಪಿಂಚಣಿ ಪಾವತಿಯಾಗುತ್ತಿದೆ.